## ವ್ಯಸನವನ್ನೂ ವರ್ಜ್ಯವಾಗಿಸಬಹುದು

‘ಡಿಜಿಟಲ್ ವ್ಯಸನ; ನಿನ್ನ ನೀನು ಮರೆತರೇನು ಸುಖವಿದೆ?’ (ಏ.27 ಮತ್ತು ಮೇ.04, ನೇಮಿಚಂದ್ರ) ಎರಡು ಕಂತುಗಳಲ್ಲಿ ಪ್ರಕಟವಾದ ಲೇಖನ ಅತ್ಯಂತ ಸಕಾಲಿಕವಾಗಿತ್ತು. ತಂತ್ರಜ್ಞಾನ ಮುಂದುವರೆದಂತೆಲ್ಲಾ ಹೆಚ್ಚಿನ ಸೌಖ್ಯಗಳು ಆಶಾದಾಯಕವಾಗಿದ್ದರೂ, ಕೆಲವೊಮ್ಮೆ ಅತಿಯಾದ ಅವಲಂಬನೆಯು ಅನೇಕ ಅಡ್ಡ ಪರಿಣಾಮಗಳೊಂದಿಗೆ ದೀರ್ಘಕಾಲೀನ ಸಮಸ್ಯೆಗಳನ್ನು ಹೊತ್ತುತರುತ್ತಿವೆ. ಆದರೆ ಎಲ್ಲಾ ಸಮಸ್ಯೆಗಳಿಗೂ ಪರಿಹಾರವಿರುವಂತೆ ಡಿಜಿಟಲ್ ವ್ಯಸನವನ್ನು ತಹಬದಿಗೆ ಹೇಗೆಲ್ಲ ತರಬಹುದು ಎನ್ನುವ ಕುರಿತು ನೈಜ ಚಿತ್ರಣಗಳೊಂದಿಗೆ ಲೇಖಕರು ವಿವರಿಸಿರುವುದು ನಿಜಕ್ಕೂ ಪ್ರಶಂಸನೀಯ.

—ಡಾ. ದೀಪಾ ಎಂ.ಬಿ.,
ಬೆಂಗಳೂರು




## ಪ್ರಭಾವಕಾರಿ ಲೇಖನ

ಡಿಜಿಟಲ್ ವ್ಯಸನದ ಕುರಿತ ಲೇಖನ ಪ್ರಭಾವಕಾರಿಯಾಗಿದೆ. ಈ ರೀತಿಯ ಇನ್ನಷ್ಟು ಉತ್ತಮ ಲೇಖನಗಳು ಪ್ರಕಟಗೊಳ್ಳಲಿ. ‘ಮಕ್ಕಳ ಮೇಲೆ ಸಾಮಾಜಿಕ ಜಾಲತಾಣಗಳ ಪ್ರಭಾವ’ದ ಕುರಿತು ಇದೇ ರೀತಿಯ ವಿಸ್ತೃತ ಲೇಖನ ಪ್ರಕಟವಾಗಲಿ. ಇದರಿಂದ ತುಂಬಾ ಜನರಿಗೆ ಉಪಯೋಗವಾಗುತ್ತದೆ.

—ಆರ್. ರಘು, ಉಜ್ವಲಾ

## ದೊಂಬರಾಟದ ನೆನಪು

‘ವಧು ಕಾಜೋಲ್ ವರ ಶಾರೂಖ್’ (ಮೇ.04, ಪ್ರಕಾಶ ಕಂದಕೂರ) ಲೇಖನ ಸೊಗಸಾಗಿದೆ. ಪುಷ್ಕರ ಜಾತ್ರೆಯಲ್ಲಿ ಕೋತಿ ಆಡಿಸುವಾತನ ವಧು ನೋಡುವ ಶಾಸ್ತ್ರದ ಚಿತ್ರಗಳು ಕೂಡ ಚೆನ್ನಾಗಿವೆ. ನಾವು ಸಣ್ಣವರಿದ್ದಾಗ ದೊಂಬರಾಟದವರು, ಕೋತಿ ಆಡಿಸುವವರು ಮನೆ ಬಳಿ ಬರುತ್ತಲೇ ಇದ್ದರು, ಅದರಲ್ಲೂ ಬೇಸಿಗೆ ರಜೆಯಲ್ಲಿ ಕಡ್ಡಾಯವಾಗಿರುತ್ತಿದ್ದರು.

ಆಗ ನಮ್ಮ ಬಡಾವಣೆಗೆ ಸರಿಯಾದ ರಸ್ತೆ ಕೂಡ ಇರಲಿಲ್ಲ. ಇರುವ ಜಾಗದಲ್ಲೇ ದೊಂಬರಾಟದವರು ಕಂಬ ನೆಟ್ಟು ಹಗ್ಗ ಕಟ್ಟಿ ಆಟ ಶುರು ಮಾಡುತ್ತಿದ್ದರು. ಹಗ್ಗದ ಮೇಲೆ ಮಕ್ಕಳು ನಡೆಯುವುದು, ಕೋತಿ ಆಡಿಸುವುದು, ಕುಣಿತ ಇವೆಲ್ಲಾ ನಮಗೆ ದೊಡ್ಡ ಮನರಂಜನೆ. ಸುಮಾರು ಎರಡು ಗಂಟೆ ಕಾಲ ಈ ಆಟಗಳು ನಡೆಯುತ್ತಿದ್ದವು. ಕೋತಿಗಳ ಮದುವೆ ಕೂಡ ನಡೆಯುತ್ತಿತ್ತು. ದೊಡ್ಡವರು ಚಿಕ್ಕವರೆನ್ನದೆ ಎಲ್ಲರೂ ಆಟ ನೋಡಲು ಸೇರುತ್ತಿದ್ದರು. ಎಲ್ಲರಿಗೂ ಭರಪೂರ ಮನರಂಜನೆ. ಕಡೆಗೆ ಆ ಕುಣಿಸುವಾತನಿಗೆ ಎಲ್ಲರೂ ಕಾಸು ಹಾಕುತ್ತಿದ್ದರು. ಈಗ ಆಟ ಆಡಿಸುವವರೂ ಕಾಣಿಸುತ್ತಿಲ್ಲ. ಇಂತಹ ಅಪರೂಪದ ವಿದ್ಯಮಾನವನ್ನು ಮೂಲಕ ನನ್ನ ಬಾಲ್ಯದ ದಿನಗಳನ್ನು ನೆನಪು ಮಾಡಿಕೊಟ್ಟರು.

—ಎಸ್.ವಿ. ಗೋಪಾಲ್ ರಾವ್



## ನೈಜ ಶಿಕ್ಷಣದತ್ತ ಗಮನ ಹರಿಸಲಿ

‘ಹೊಸ ಶಿಕ್ಷಣ ನೀತಿ’ (ಮೇ. 4, ಗುರುರಾಜ್ ಎಸ್. ದಾವಣಗೆರೆ) ಬಗ್ಗೆ ಸಾಕಷ್ಟು ಬರಹಗಳು, ಚರ್ಚೆಗಳು ನಡೆದಿವೆ. ಇದರ ತಿರುಳನ್ನು ಲೇಖಕ ಕನ್ನಡದಲ್ಲಿ ಹಿಡಿದಿಟ್ಟಿದ್ದಾರೆ.

ಈ ವರದಿಯ ರೂವಾರಿ ಕಸ್ತೂರಿ ರಂಗನ್ ಅವರು ನಮಗೆ ತಿಳಿದಿರುವಂತೆ ಒಬ್ಬ ಬಾಹ್ಯಾಕಾಶ ವಿಜ್ಞಾನಿ ಮತ್ತು ಪರಿಸರ ವಿಜ್ಞಾನಿ ಅಷ್ಟೇ ಹೊರತು, ಶಿಕ್ಷಣತಜ್ಞ ಅಲ್ಲ. ಇವರ ಜ್ಞಾನವನ್ನಾಧರಿಸಿ ರೂಪುಗೊಂಡ ನೀತಿ ಎಷ್ಟು ಸಮಂಜಸ ಎಂಬುದು ಪ್ರಶ್ನೆ. ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಸಹಜವಾಗಿ ಬೆಳೆದು ಬಂದಿರುವ ಭಾಷಾಸಂಪತ್ತನ್ನು ನಾಶಮಾಡುವ ದಿಕ್ಕಿನಲ್ಲಿ ‘ಹೊಶಿನೀ’ ಸಿದ್ಧಪಡಿಸಿದಂತಿದೆ. ಭಾಷಾವಿರೋಧಿಯಂತೆ ಕಾಣುತ್ತಿರುವ ಈ ವರದಿಗೆ ಬೆಲೆ ಕೊಡದೆ ನೈಜ ಶಿಕ್ಷಣದತ್ತ ಗಮನ ಹರಿಸಬೇಕಿದೆ.

—ಹೊರೆಯಾಲ ದೊರೆಸ್ವಾಮಿ, ಮೈಸೂರು

## ಶಿಕ್ಷಣ ಮಾರ್ಗದರ್ಶಿ

‘ಹೊಸ ಶಿಕ್ಷಣ ನೀತಿ’ ಲೇಖನ ಅನೇಕ ಅನುಮಾನಗಳನ್ನು ಪರಿಹರಿಸಿತು. ತರಬೇತಿ ಪಡೆದ ಶಿಕ್ಷಕರ ಕೊರತೆ ಹೆಚ್ಚಿರುವಾಗ ನೀತಿಯ ಅನುಷ್ಠಾನ ಸಾಧ್ಯವೇ ಎಂಬ ಪ್ರಶ್ನೆ ಎದುರಾಯಿತು. 9 ಮತ್ತು 10 ತರಗತಿಯಲ್ಲಿ ಎಂಟೆಂಟು ವಿಷಯಗಳನ್ನು ಓದುವುದು ಸುಲಭವೇ? ಶಿಕ್ಷಣ ನೀತಿಯ ಬಗ್ಗೆ ಇದೊಂದು ಸುದೀರ್ಘ ಹಾಗೂ ಮಾಹಿತಿಪೂರ್ಣ ಲೇಖನ. ಶಿಕ್ಷಣ ಕ್ಷೇತ್ರದಲ್ಲಿರುವ ಎಲ್ಲರಿಗೂ ಲೇಖನ ಮಾರ್ಗದರ್ಶಿಯಾಗಲಿದೆ.

—ಜ್ಯೋತಿ ಹೆಗಡೆ

## ಸೂಕ್ತ ವಿಶ್ಲೇಷಣೆ

ಈ ಲೇಖನ ಮಾಹಿತಿಪೂರ್ಣವಾಗಿದೆ. ಶಿಕ್ಷಣ ನೀತಿಯ ಕುರಿತು ವಿಶ್ಲೇಷಣೆ ಸಮರ್ಪಕವಾಗಿದೆ. ನೀತಿಯ ಆಶಯ, ಅದರ ಅನುಷ್ಠಾನಕ್ಕಿರುವ ತೊಡರುಗಳನ್ನು ವಿಶದವಾಗಿ ತೆರೆದಿಟ್ಟಿದೆ. ನೀತಿಯ ಕರಡಿನಲ್ಲಿರುವ ಪ್ರತಿ ಅಂಶವನ್ನೂ ಲೇಖಕರು ಸರಳವಾಗಿ ವಿವರಿಸಿದ್ದಾರೆ.

– ಶಾಲಿನಿ ಚಂದನ್, ಹುಬ್ಬಳ್ಳಿ

## ಚಂದಾಳ ಕುರಿತು ಚೆಂದದ ಲೇಖನ

‘ಚೆಂದದ ಚಂದಾಳ’ (ಮೇ. 04, ವಿನು ಗಂಗೆ) ಮರಗಳ ಕಥೆಯಲ್ಲಿ ಚಂದಾಳ ಮರದ ಬಗೆಗಿನ ಲೇಖನ ಅಮೋಘವಾಗಿದೆ. ಇದರ ಬಗ್ಗೆ ನಮಗೆ ಸ್ವಲ್ಪವೂ ಮಾಹಿತಿ ಇರಲಿಲ್ಲ. ಇಂತಹ ಸಾಕಷ್ಟು ಮರಗಳ ಬಗ್ಗೆ ಪರಿಚಯ ಮೂಡಿಬರುತ್ತಿರುವುದು ಉಪಯೋಗಕಾರಿ. ಹೀಗೆ ಉಪಯುಕ್ತ ಮಾಹಿತಿ ಒಳಗೊಂಡ ಲೇಖನಗಳು ಇನ್ನೂ ಹೆಚ್ಚು ಹೆಚ್ಚು ಮೂಡಿಬರಲಿ ಎಂದು ಆಶಿಸುತ್ತೇನೆ.

—ವೀಣಾ ಆರ್., ಬೆಂಗಳೂರು

## ಮನಮುಟ್ಟುವ ‘ಪದರುಗಳು’

‘ಪದರಗಳು’ ಧಾರಾವಾಹಿ ಬಹಳ ಚೆನ್ನಾಗಿದೆ. ಮನೋವೈಜ್ಞಾನಿಕ ನೆಲೆಯಲ್ಲಿ ಕಥೆ ಮೂಡಿಬರುತ್ತಿರುವುದು ಆಸಕ್ತಿದಾಯಕವಾಗಿದೆ. ನಿವೇದಿತಾಳ ಮನದಾಳದ ಪದರಗಳು ಒಂದೊಂದಾಗಿ ನಿರೂಪಿತವಾಗುತ್ತಿವೆ. ವಿವೇಕಾನಂದ ಕಾಮತ್ ಅವರು ಧಾರಾವಾಹಿಯನ್ನು ಮನಮುಟ್ಟುವಂತೆ ನಿರೂಪಿಸುತ್ತಿದ್ದಾರೆ.

—ನಂದಿತಾ ಎಂ., ಚಿಕ್ಕಮಗಳೂರು

## ಕನ್ನಡದ ಅಸ್ಮಿತೆಯ ಮಠ

‘ಕಾಶಿಯಲ್ಲಿನ ಕನ್ನಡತಾಣ ಜಂಗಮವಾಡಿ ಮಠ’ (ಮೇ.04, ಡಿ.ಜಿ. ಮಲ್ಲಿಕಾರ್ಜುನ) ಪ್ರವಾಸ ಲೇಖನ ಅಪರೂಪದ್ದಾಗಿದೆ. ಕಾಶಿಯಲ್ಲಿ ನಮ್ಮ ಕನ್ನಡ ಅಸ್ಮಿತೆ ಇರುವುದು ಕಂಡು ಸಂತಸವಾಯಿತು. ಇತಿಹಾಸದ ದಾಖಲೆ ಮಾಹಿತಿಪೂರ್ಣವಾಗಿದೆ. ಜ್ಞಾನಪೀಠವಾಗಿರುವ ಜಂಗಮವಾಡಿ ಮಠದಲ್ಲಿ ಅಮೂಲ್ಯ ಗ್ರಂಥಾಲಯ, ಗುರುಕುಲ ಇರುವುದು ವಿಶೇಷವೆನಿಸಿತು.

— ಮಹೇಶ್ ಎಂ., ಮೈಸೂರು

### ತಿದ್ದುಪಡಿ

‘ಹೊಸ ಶಿಕ್ಷಣ ನೀತಿ; ಆಕಾಶದಷ್ಟು ಅವಕಾಶ! ಹಾರಲು ಉಂಟೆ ರೆಕ್ಕೆ?’ ಲೇಖನದಲ್ಲಿ ನಾಲ್ಕು ಬಾರಿ ಹೊಸ ಪಠ್ಯಪುಸ್ತಕ ರೂಪಿಸಿರುವ ಮಾಹಿತಿಯಲ್ಲಿ ಮೊದಲ ಪಠ್ಯ ರಚನೆ 1875 ಎಂದಾಗಿದೆ. ಅದು 1975 ಎಂದಾಗಬೇಕಿತ್ತು.

—ಸಂ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in